೪. ಬದುಕಿನ ವಾಸ್ತವತೆ ಮತ್ತು ಶಿಕ್ಷಣ

ಸರಳ ಬದುಕಿನ ಸೌಂದರ್ಯ

ಸ್ಪರ್ಧಾ ಮನೋಭಾವದಿಂದ ಹುಟ್ಟುವ ಮಹತ್ತ್ವಾಕಾಂಕ್ಷೆ ಮತ್ತು ಗುರಿಗಳು ನಮ್ಮನ್ನು ನಾವು ಇತರರೊಡನೆ ಹೋಲಿಕೆ ಮಾಡಿಕೊಳ್ಳುವುದರಿಂದ ಹುಟ್ಟುವ ಕಾಯಿಲೆಗಳು. ಬದುಕು ಎಂಬುದು ಯಾರೊಡನೆಯೂ ಹೋಲಿಕೆ ಮಾಡಿಕೊಳ್ಳದೆ ತನಗೆ ತಾನೇ ಪಡೆಯಬಹುದಾದ ಸಂತೋಷ, ನೆಮ್ಮದಿ, ತೃಪ್ತಿಗಳಿಗೆ ಸಂಬಂಧ ಪಟ್ಟುದಲ್ಲವೆ? ಮನುಷ್ಯ ಈ ಬದುಕಿನಲ್ಲಿ ಏನೆಲ್ಲವನ್ನು ಸಾಧಿಸಿದರೂ ಅದು ತನ್ನೊಳಗೆ ತಾನು ಪಡೆಯಬಹುದಾದ ಸಂತೋಷ ತೃಪ್ತಿಗಳಿಗಾಗಿ ಅಲ್ಲವೆ? ಇವುಗಳನ್ನು ಪಡೆಯಲು ನಾವು ನಮ್ಮ ಮಣ್ಣಿನ ಕಣ್ಣನ್ನು ಕುರುಡು ಮಾಡಿಕೊಳ್ಳಬೇಕೆ? ಅಳುವ ಮಗುವಿನ ದುಃಖ ಶಮನ ಮಾಡಿದಾಗ, ಬಹಳ ಕಾಲದಿಂದ 'ನನ್ನದು' ಎಂದು ಕಾಪಾಡಿಕೊಂಡು ಬಂದ ಒಂದು ಭಾವನೆಯನ್ನೋ, ವಸ್ತುವನ್ನು ಅನಿವಾರ್ಯ ಪ್ರಸಂಗದಲ್ಲಿ ನಿರುಮ್ಮಳವಾಗಿ ತ್ಯಜಿಸಿದಾಗ ಅಥವಾ ಇತರರೊಡನೆ ಹಂಚಿಕೊಂಡಾಗ ಪಡೆಯಬಹುದಾದ ಸಂತೋಷ ಕೆಳಮಟ್ಟಕ್ಕೆ ಸೇರಿದೆಯೆ?

ನಮ್ಮ ಇಂದಿನ ಶಿಕ್ಷಣ ಇಂತಹ ಪ್ರಶ್ನೆಗಳಿಗೆ ಎಡೆಮಾಡಿಕೊಡಲಾರದು. ಯಾವುದೇ ನಿಲ್ದಾಣದಲ್ಲಿ ನಿಲ್ಲದೆ, ನಿಂತರೂ ಕೆಲವೇ ಕ್ಷಣ ನಿಂತು ವೇಗವಾಗಿ ಸಾಗುವ ರೈಲುಗಾಡಿಯಂತೆ ಶಿಕ್ಷಣ ಮಕ್ಕಳನ್ನು ಮೊದಲನೇ ತರಗತಿಯಿಂದ ಎಳೆದೊಯ್ದು ಕೊನೆ ಮುಟ್ಟುವವರೆಗೆ ಸಾಗಿಸಿಬಿಡುತ್ತದೆ. ಆಗೊಮ್ಮೆ ಈಗೊಮ್ಮೆ ನಿಂತು ತಾನು ಸವೆಸಿದ ದಾರಿಯನ್ನು ಹಿಂತಿರುಗಿ ನೋಡುವ, ಆತ್ಮವಿಮರ್ಶೆ ಮಾಡುವ ಯಾವ ಅವಕಾಶವೂ ಇಲ್ಲ, ಯಾವ ಪರಿಪಾಟವೂ ಇಲ್ಲ. ಸಮಾಜದ ಭಾಗವಾಗಿ ಬದುಕಬೇಕಾಗಿರುವ ನಮ್ಮ ಮಕ್ಕಳಿಗೆ ಈ ಶಿಕ್ಷಣ ಸಮಾಜದ ವಾಸ್ತವತೆಗಳಿಗೆ ಸುತ್ತಣ ಪರಿಸರಕ್ಕೆ ಸ್ಪಂದಿಸಲು ಅವಕಾಶವನ್ನೇ ಮಾಡಿಕೊಡುವುದಿಲ್ಲ. ವಿಕಾಸದ ಹಾದಿಯಲ್ಲಿ ಅನೇಕ ಪ್ರಾಣಿಪಕ್ಷಿಗಳು ಸಂತತಿ ಹೀನವಾಗಿ ನಶಿಸಿಹೋಗಿದ್ದಕ್ಕೆ ಕಾರಣ ಈ ಪ್ರಾಣಿಗಳು ತಮ್ಮ ಸುತ್ತಣ ಪರಿಸರಕ್ಕೆ ಅಗತ್ಯ ಹೊಂದಾಣಿಕೆ ಮಾಡಿಕೊಳ್ಳಲಾರದೆ ಹೋದದ್ದು. ಇಂದಿನ ಶಿಕ್ಷಣವೂ ಮಕ್ಕಳನ್ನು ತಮ್ಮ ವಾಸ್ತವ ಪರಿಸರಕ್ಕೆ ಸ್ಪಂದಿಸದಂತೆ ಕೇವಲ ಯಶಸ್ಸಿನ ಕನಸಿನ ಲೋಕಕ್ಕೆ ತಯಾರು ಮಾಡುತ್ತಿದೆ. ಇದು ಕೊನೆಗೆ ಮನುಕುಲದ ವಿನಾಶಕ್ಕೇ ಕಾರಣವಾಗಬಹುದು.

ಲಿಂಕನ್ ಶಿಕ್ಷಕನಿಗೆ ಹೇಳಿದ್ದು

ಅಬ್ರಹಾಂ ಲಿಂಕನ್ ತನ್ನ ಮಗ ಓದುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯನಿಗೆ ಬರೆದ ಪತ್ರದಲ್ಲಿ ಹೇಗೆ ಗ್ರಹಿಕೆ ಎಂಬುದು ಪುಸ್ತಕದಾಚೆಗೆ ವಿಸ್ತರಿಸಬೇಕೆಂಬುದನ್ನು ವಿವರಿಸುತ್ತಾನೆ. ತನ್ನತನದಲ್ಲಿ ನಂಬಿಕೆ ಇಟ್ಟು ಬಾಜಾಬಜಂತ್ರಿಯಿಂದ ದೂರವಿರಬೇಕಾದುದನ್ನು ಶಾಲಾಶಿಕ್ಷಣ ಕಲಿಸಬೇಕೆಂದು ಬಯಸುತ್ತಾನೆ. ಇದು ಶಿಕ್ಷಣದ ಬಹಳ ಮುಖ್ಯ ಉದ್ದೇಶ. ಇದನ್ನು ಪ್ರೊ. ಬಿ.ವಿ. ವೀರಭದ್ರಪ್ಪನವರು ಕನ್ನಡಕ್ಕೆ ಹೀಗೆ ಅನುವಾದಮಾಡಿದ್ದಾರೆ:

ನಾ ಬಲ್ಲೆ
ಎಲ್ಲರೂ ನ್ಯಾಯಪರರಲ್ಲ
ಎಲ್ಲರೂ ಸತ್ಯವಂತರಲ್ಲ ಎಂಬುದನು.
ಆದರೆ ಪ್ರತಿಯೊಬ್ಬ ಮುಟ್ಠಾಳನಿಗೆ ಪ್ರತಿಯಾಗಿ
ಒಬ್ಬ ಧೀರೋದಾತ್ತ,
ಪ್ರತಿಯೊಬ್ಬ ಸ್ವಾರ್ಥಿ ರಾಜಕಾರಣಿಗೆ ಬದಲು
ಒಬ್ಬ ನಿಷ್ಠಾವಂತ ನಾಯಕ,
ಪ್ರತಿಯೊಬ್ಬ ಶತ್ರುವಿಗೆ ಬದಲು
ಒಬ್ಬ ಸನ್ಮಿತ್ರನಿರುವನೆಂಬುದನು ಕಲಿಸು
ನಿನಗೆ ಸಾಧ್ಯವಾದರೆ ಕಲಿಸು.
ಗಳಿಸಿದ ಒಂದು ಡಾಲರು
ಸಿಕ್ಕ ಐದಕ್ಕಿಂತ ಹೆಚ್ಚು ಬೆಲೆಯುಳ್ಳದೆಂಬುದನು
ಕಲಿಸು ಸೋಲುವುದನು ಕಲಿಯಲು
ಮತ್ತು ಗೆಲುವಿನಲ್ಲಿ ಹರ್ಷಿಸುವುದನು
ಪುಸ್ತಕಗಳ ಅದ್ಭುತಗಳನ್ನು ಅವನಿಗೆ ಕಲಿಸು.
ಆದರೆ ಆಕಾಶದ ಹಕ್ಕಿಗಳನ್ನು,
ಹಾರಾಡುವ ದುಂಬಿಗಳನ್ನು ಮತ್ತು
ಹಸಿರು ಮಲೆಯ ಹೂಗಳನ್ನು ಕುರಿತು
ಧ್ಯಾನಿಸಲು ಅವನಿಗೆ ಬಿಡುವು ಮಾಡಿಕೊಡು
ಶಾಲೆಯಲಿ ವಂಚಿಸುವುದಕ್ಕಿಂತ
ಫೇಲಾಗುವುದು ಹೆಚ್ಚು ಗೌರವವೆಂಬುದನು ಕಲಿಸು
ಎಲ್ಲರೂ ತಪ್ಪೆಂದಾಗ
ತನ್ನ ವಿಚಾರಗಳಲಿ ಅವನು ನಂಬಿಕೆ ಉಳಿಸಿಕೊಳ್ಳಲು ಕಲಿಸು

ನಯದ ಜನರಲಿ ವಿನಯದಲಿ ಮತ್ತು
ಒರಟರಲಿ ಒರಟುತನದಿ ನಡೆಯುವುದನು ಕಲಿಸು
ಬೆವರು ಬುದ್ಧಿಗಳನು
ಹೆಚ್ಚು ಬೆಲೆ ತೆರುವವನಿಗೆ ಮಾರುವುದನು
ಆದರೆ ತನ್ನ ಹೃದಯ ಮತ್ತು ಆತ್ಮಕ್ಕೆ
ಬೆಲೆಯ ಚೀಟಿಯನು
ಎಂದಿಗೂ ಅಂಟಿಸದಿರುವುದನು ಕಲಿಸು
ಬೇಸರಗೊಂಡಾಗ ಗುನುವುದನು
ಕಣ್ಣೀರಿನಲಿ ಅವಮಾನವಿಲ್ಲೆಂಬುದನು ಮತ್ತು
ತನ್ನಲ್ಲಿ ತಾನು ವಿಶ್ವಾಸ ಹೊಂದುವುದನು ಕಲಿಸು
ಆಗಲೇ ಅವನಿಗೆ ಮಾನವೀಯತೆಯಲಿ
ದಿವ್ಯ ವಿಶ್ವಾಸ ಮೂಡುವುದು

ಶಿಕ್ಷಣ ಕೇವಲ ಅಕ್ಷರಗಳ ಮೂಲಕ ಕಲಿಯುವ ಪ್ರಕ್ರಿಯೆಯಲ್ಲ. ಹಾಗೆ ಮಾತ್ರ ಕಲಿತವರು ನಿಜವಾಗಿಯೂ ಏನನ್ನೂ ಕಲಿತಿಲ್ಲ. ಕೌಶಲಗಳನ್ನು ಕಲಿಯುತ್ತ ಸರಳವಾಗಿರಬಲ್ಲ, ಗಳಿಸಿದ ಆತ್ಮವಿಶ್ವಾಸದಿಂದ ಇತರರ ಶೋಷಣೆ ಮಾಡದೆ ಬದುಕಬಲ್ಲ, ವಿಚಾರಶೀಲತೆಯ ಜೊತೆಗೆ ಸೌಂದರ್ಯವನ್ನು ಆಸ್ವಾದಿಸಬಲ್ಲ ಹೃದಯವಂತಿಕೆಯೆ ಶಿಕ್ಷಣ. ಆದರೆ ಇಂದಿನ ಶಾಲಾ ಶಿಕ್ಷಣ ಈ ಅಂಶಗಳನ್ನು ಶಿಕ್ಷಣಾರ್ಹ ವಿಷಯ ಎಂದು ಪರಿಗಣಿಸುತ್ತದೆಯೆ? ಬದಲಾಗಿ 'ಈ ಬಗೆಯ ಆದರ್ಶಗಳು ಕಂಪ್ಯೂಟರ್ ಯುಗದ ಬದುಕಿಗೆ ಎಳ್ಳಷ್ಟೂ ಸಂಬಂಧಪಡುವುದಿಲ್ಲ. ಮನುಷ್ಯಸಂತೋಷದ ನೆಲೆಗಳು ಯಾವಾಗಲೂ ವಸ್ತು ಪರಿಕರಗಳನ್ನು ಪಡೆಯುವುದರಿಂದ ಮಾತ್ರ ಸಾಧ್ಯ, ಅದನ್ನು ತ್ಯಜಿಸುವುದರಿಂದಲ್ಲ' ಎಂಬ ಗಟ್ಟಿಗೊಂಡ ನಂಬಿಕೆಯ ಮೇಲೆ ರೂಪಿತವಾಗಿದೆ. ಈ ನಂಬಿಕೆಯ ದುಷ್ಪರಿಣಾಮಗಳು ಪರಿಸರವನ್ನೂ ಮನುಷ್ಯ ಸಂಬಂಧಗಳನ್ನು ದುರಂತಮಯವಾಗಿ ಮಾಡಿರುವುದು ಅನುಭವಕ್ಕೆ ಬರುತ್ತಿದ್ದರೂ ಈ ಸಂವೇದನೆಗಳಿಗೆ ಸ್ಪಂದಿಸದೆ ಸಮೂಹದ ಮನಸ್ಸನ್ನು ಸ್ನಿಗ್ಧಗೊಳಿಸುವಲ್ಲಿ ನಮ್ಮ ಇಂದಿನ ಜಾಗತೀಕರಣ ಹಾಗೂ ಶಿಕ್ಷಣ ಯಶಸ್ವಿಯಾಗಿವೆ. ವಾಸ್ತವ ಸತ್ಯದಿಂದ ದೂರಾಗುವ ಮೂಲಕ ಮಾತ್ರ ಹೆಚ್ಚು ಬೆಲೆ ಗಿಟ್ಟಿಸಬಹುದಾದ ಇಂದಿನ ದಿನಗಳಲ್ಲಿ ಶಿಕ್ಷಣವೂ ಇದೇ ಮಾರುಕಟ್ಟೆಯ ಸಮೀಕರಣವನ್ನು ಬಳಸುತ್ತಿದೆ. ಹಾಗಾಗಿ ಇಂದಿನ ಶಿಕ್ಷಣವನ್ನು ಒಂದೇ ಮಾತಿನಲ್ಲಿ ವ್ಯಾಖ್ಯಾನಿಸಬೇಕೆಂದರೆ "ವಾಸ್ತವಕ್ಕೆ ಸ್ಪಂದಿಸದ ಮನಸ್ಸುಗಳನ್ನು ತಯಾರಿಸುವ ಪದ್ಧತಿ" ಎಂದು ಹೇಳಬೇಕಾಗುತ್ತದೆ.

ಪ್ರತಿಭೆ, ಶಿಕ್ಷಣ ಮತ್ತು ಹಣ

ಅದ್ವಿತೀಯ ಪ್ರತಿಬಯುಳ್ಳವರು ಎಲ್ಲೋ ಕೆಲವರು. ಹಾಗಾಗಿ ಇಂತಹ ಬೆರಳೆಣಿಕೆಯ ಮಕ್ಕಳಿಗಾಗಿ ಅವರ ಪ್ರತಿಭೆಗಳು ಅರಳಲು ಸಹಾಯ ಮಾಡುವಂತೆ ಇಡೀ ಶಿಕ್ಷಣ ರೂಪುಗೊಳ್ಳುವುದು ಊಹಿಸಲಾರದ ಸಂಗತಿ. ಭೀಮ್‌ಸೇನ ಜೋಶಿಯವರಾಗಲೀ, ಗಣಿತಜ್ಞ ರಾಮಾನುಜಂ ಆಗಲಿ, ಶಿವರಾಮ ಕಾರಂತರಾಗಲೀ ಅಥವಾ ಸುಬ್ಬುಲಕ್ಷ್ಮಿಯಂಥವರಾಗಲಿ ಶಾಲೆಯಿಂದ ದೂರವಾಗಿ ಉಳಿದದ್ದರಿಂದಲೇ ಅವರು ಅದ್ವಿತೀಯರಾದರೆಂದೂ ಆದ್ದರಿಂದ ಇಡೀ ಶಿಕ್ಷಣ ವ್ಯವಸ್ಥೆ ನಿರುಪಯುಕ್ತವೆಂದೂ ಹೇಳಲಾಗದು. ಶಾಲೆಗಳು ಕೆಲಸ ಮಾಡಬೇಕಾದದ್ದು ಬಹುಸಂಖ್ಯಾತರಾದ ಸರಾಸರಿ ಪ್ರತಿಭೆಗಳು ಅರಳಲು. ಇವರು ನೆಮ್ಮದಿಯ ಜೀವನ ನಡೆಸಲು ಅಗತ್ಯವಾದ ಶಿಕ್ಷಣವನ್ನು ನಮ್ಮ ಶಿಕ್ಷಣ ವ್ಯವಸ್ಥೆ ಕೊಡಬೇಕು. ನಮ್ಮ ಶಾಲೆಗಳು ಕೆಲವು ಮಕ್ಕಳಲ್ಲಾದರೂ ಇರಬಹುದಾದ ಅಸಾಧಾರಣ ಪ್ರತಿಭೆಗಳನ್ನು ಗುರುತಿಸುವ, ಪುರಸ್ಕರಿಸುವ ಪರಿಪಾಟವನ್ನು ರೂಢಿಸಿಕೊಳ್ಳಬೇಕು. ನಮ್ಮ ಶಾಲೆಗಳು ಸದಾಕಾಲವೂ ಒಂದು ಸರಾಸರಿಗೆ ಸೀಮಿತವಾಗಿ ಕಾರ್ಯ ನಿರ್ವಹಿಸುವುದರಿಂದ ಅಸಾಧಾರಣ ಪ್ರತಿಭೆಗಳನ್ನು ಗುರುತಿಸದಾಗಿದೆ. ಹಾಗಾಗಿ ಈ ಪ್ರತಿಭೆಗಳು ಹೊರಗುಳಿಯಬೇಕಾದದ್ದು ಅನಿವಾರ್ಯ.

ನಮ್ಮ ಶಾಲೆಗಳು ಇಂದಿನ ದಿನಗಳಲ್ಲಿ ರೂಪಿಸುವ ಪ್ರತಿಭೆಗಳು ಯಾವುವು? ನಮ್ಮ ಇಂದಿನ ಸಮಾಜ ಯಾವುದನ್ನು ಯಶಸ್ಸು ಎಂದು ಭಾವಿಸುತ್ತದೆಯೋ ಅದನ್ನು ಹೊಂದಬಲ್ಲ ಸಾಮರ್ಥ್ಯಗಳನ್ನು ಕೊಡುವುದೇ ಶಿಕ್ಷಣದ ಉದ್ದೇಶವಾಗಿದೆ. ಅದರಲ್ಲೂ ಮುಖ್ಯವಾಗಿ ಹಣಗಳಿಕೆಯ ಸಾಮರ್ಥ್ಯವೇ ಪ್ರಮುಖ ಪ್ರತಿಭೆಯಾಗಿದೆ. ಇದಕ್ಕಾಗಿ ನಮ್ಮ ಶಿಕ್ಷಣ ಕ್ಷೇತ್ರ ಎಂದರೆ ಶಾಲಾಕಾಲೇಜುಗಳು ತಾವೇ ತಮ್ಮ ಹಣಗಳಿಕೆಯ ಸಾಮರ್ಥ್ಯವನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಿ ತೋರಿಸಿಕೊಳ್ಳಬೇಕಾಗಿದೆ. ಒಂದು ಬಡಶಾಲೆ ತಾನೇ ಬಡವಾಗಿರುವಾಗ ಮಕ್ಕಳಿಗೆ ಹಣ ಗಳಿಸುವ ಸಾಮರ್ಥ್ಯವನ್ನು ಕೊಡುತ್ತದೆಂದು ನಿರೀಕ್ಷಿಸಲಾಗುವುದಿಲ್ಲ. ಹಣ ಗಳಿಸಲು ಭಾರತದಂತಹ ಬಡರಾಷ್ಟ್ರದಲ್ಲಿ ಶೋಷಣೆ ಬಿಟ್ಟರೆ ಅನ್ಯಮಾರ್ಗವಿಲ್ಲ. ಹಾಗಾಗಿ ಈ ಶಾಲೆಗಳು ಸ್ವಯಂ ತಾವೇ ಶೋಷಣೆಯ ದೊಡ್ಡ ಕೇಂದ್ರಗಳಾಗಬೇಕು. ಬಲಾಢ್ಯರು ಮಾತ್ರ ಬೆಳೆಯಬಹುದಾದ ವಾತಾವರಣವನ್ನು ಸೃಷ್ಟಿಸಬೇಕು. ಹಣಬಲ ಇರುವ, ಶೋಷಣೆಯನ್ನು ಯಾವ ಅಪರಾಧಿಪ್ರಜ್ಞೆಯೂ ಇಲ್ಲದೆ ಜೀವನದ ಮುಖ್ಯ ಉದ್ದೇಶವನ್ನಾಗಿ ರೂಢಿಸಿಕೊಳ್ಳಬಲ್ಲ ಮಕ್ಕಳು ಇಲ್ಲಿ ಬೆಳೆಯಬೇಕು. ಇದರ ಮುಂದುವರಿದ ಭಾಗ ಎಂದರೆ, ಸಮಾಜದಲ್ಲಿ ಬಡವ–ಬಲ್ಲಿದ ತಾರತಮ್ಯ ಹೆಚ್ಚಾದಷ್ಟೂ ಈ ಸಾಹುಕಾರರು ತಮ್ಮ ಯಶಸ್ಸಿನ ರುಚಿಯನ್ನು ಹೆಚ್ಚು ಅನುಭವಿಸಬಹುದು, ಹೆಮ್ಮೆಪಡಬಹುದು. ಹಾಗಾಗಿ ಇಂತಹ ಶಾಲೆ ಮೂಲತಃ ತಾನೇ ಈ ಬಗೆಯ ಯಶಸ್ಸನ್ನು ಬಯಸುವ ಮೂಲಕ ತನ್ನ ಶಿಕ್ಷಣಾರ್ಥಿಗಳಿಗೆ ಈ ಯಶಸ್ಸನ್ನು ಕೊಡುವ ಅತ್ಯಂತ ಸುಲಭ ಮಾರ್ಗವನ್ನು ಹುಡುಕುತ್ತದೆ. ಎಂದರೆ ತಾನು

ಆಯ್ಕೆ ಮಾಡುವ ವಿದ್ಯಾರ್ಥಿಗಳು ಮೊದಲಿಗೆ ಶಾಲೆಯ ಯಶಸ್ಸನ್ನು ಪೋಷಿಸುವ ಹಣವಂತರಾಗಿರಬೇಕು ಮತ್ತು ಎರಡನೆಯದಾಗಿ ಬುದ್ಧಿವಂತರಾಗಿದ್ದು ಅಧ್ಯಾಪಕರ ಕಡಿಮೆ ಶ್ರಮದಲ್ಲಿ ಹೆಚ್ಚು ಅಂಕ ಗಳಿಸಿ ಶಾಲೆಗೆ ಕೀರ್ತಿ ತರಬೇಕು ಎಂದು ಅಪೇಕ್ಷಿಸುತ್ತದೆ. ಇಂತಹ ಒಂದು ಹೆಗ್ಗುರಿಯನ್ನು ಹಾಕಿಕೊಡುವ ಶಾಲೆಗಳೇ ನಮ್ಮ ನಡುವಿನ ಪ್ರತಿಷ್ಠಿತ ವರ್ಗದ 'ಅಂತಾರಾಷ್ಟ್ರೀಯ ಖ್ಯಾತಿ'ಯ ಶಾಲೆಗಳು.

ಶಿಕ್ಷಣದ ಪ್ರಗತಿ ಮತ್ತು ಲಿಂಗಾನುಪಾತ

ಓದಿಸುವಣ್ಣಗಳೆನ್ನ ಮಾತಾಡ ಕಲಿಸಿದರಲ್ಲದೆ
ಮನಕ್ಕೆ ಮಾತಾಡ ಕಲಿಸಲಿಲ್ಲವಯ್ಯ
ಧನಕ್ಕೆ ಮುನಿವರಲ್ಲದೆ, ಎನ್ನ ಮನಕ್ಕೆ ಮುನಿವರಿಲ್ಲಯ್ಯ
ಧನಕ್ಕೆ ಮುನಿವರಿಗೆ ಮುನಿದು ಮನಕ್ಕೆ ಮುನಿದ
ಕೂಡಲಸಂಗಮದೇವ, ಮಡಿವಾಳ ಮಾಚಯ್ಯನು

ಈ ವಚನದಲ್ಲಿ ಧನಕ್ಕೆ ಮುನಿಯುವುದಕ್ಕೂ ಮನಕ್ಕೆ ಮುನಿಯುವುದಕ್ಕೂ ನಡುವಿನ ಅಂತರವನ್ನು ತೋರಲಾಗಿದೆ. ಜಾಗತೀಕರಣ ಪ್ರಣೀತ ಶಿಕ್ಷಣ ಧನಕ್ಕೆ ಮುನಿವುದಲ್ಲದೆ ಮನಕ್ಕೆ ಮುನಿಯುವುದಿಲ್ಲ. ಮನಕ್ಕೆ ಶಿಕ್ಷಣ ಕೊಡುವುದಕ್ಕಿಂತ ಜಾಣ ಮಾತುಗಳನ್ನಾಡುವುದನ್ನು ಕಲಿಸುವುದು ಸುಲಭ. ಸಾಕ್ಷರತೆ ಹೆಚ್ಚಾದಂತೆಲ್ಲ ನಮ್ಮ ಸಾಕ್ಷಿಪ್ರಜ್ಞೆಯೂ ಹೆಚ್ಚಾಗುತ್ತದೆ, ಅದ್ದರಿಂದ ಸಮಾಜದಲ್ಲಿ ಶೋಷಣೆ ಅಸಮಾನತೆಗಳು ಕಡಿಮೆಯಾಗುತ್ತವೆ, ದುರ್ಬಲರಿಗೂ ಬದುಕುವ ಅವಕಾಶಗಳು ಹೆಚ್ಚಾಗುತ್ತವೆ ಎಂದು ಭಾವಿಸುತ್ತೇವೆ. ಹಾಗಾಗಿ ಲಿಂಗತಾರತಮ್ಯದ ಸಮಾಜದಲ್ಲಿ ಸಾಕ್ಷರತೆಯ ಹೆಚ್ಚಳವು ಮಹಿಳೆಯರಿಗೆ ಬದುಕುವ ಸಮಾನ ಹಕ್ಕುಗಳನ್ನು ನೀಡಿ ಸಮತೋಲನ ಸಾಧಿಸುತ್ತದೆ ಎಂದು ನಿರೀಕ್ಷಿಸುತ್ತೇವೆ. ಪ್ರಪಂಚದ ಸರಾಸರಿ ಲಿಂಗಾನುಪಾತ ೧೦೦೦ ಪುರುಷರಿಗೆ ೯೯೦ ಮಹಿಳೆಯರು. ಆದರೆ ನಮ್ಮ ದೇಶದ ಲಿಂಗಾನುಪಾತವನ್ನು ಗಮನಿಸಿದರೆ ಗಾಬರಿಯಾಗುತ್ತದೆ. ೧೯೦೧ರಲ್ಲಿ ೧೦೦೦ ಪುರುಷರಿಗೆ ೯೭೨ ಮಹಿಳೆಯರಿದ್ದರು. ಆಗಿನ ನಮ್ಮ ಸಾಕ್ಷರತಾ ಪ್ರಮಾಣ ಶೇಕಡ ೫.೩೫. ಇಂದು ೨೦೧೧ರಲ್ಲಿ ನಮ್ಮ ಸಾಕ್ಷರತಾ ಪ್ರಮಾಣ ೭೪.೦೪ಕ್ಕೆ ಏರಿದೆ. ದೇಶದಲ್ಲಿ ೬೩ ಕೋಟಿ ಪುರುಷರಿದ್ದರೆ ೫೮ ಕೋಟಿ ಮಹಿಳೆಯರಿದ್ದಾರೆ. ಆರು ವರ್ಷದ ಒಳಗಿನ ಮಕ್ಕಳ ಲಿಂಗಾನುಪಾತ ತೆಗೆದುಕೊಂಡರೆ ೨೦೦೧ರ ಜನಗಣತಿಯಲ್ಲಿ ೧೦೦೦ ಗಂಡುಮಕ್ಕಳಿಗೆ ೯೨೭ ಹೆಣ್ಣು ಮಕ್ಕಳಿದ್ದವು. ಆದರೆ ೨೦೧೧ರ ಜನಗಣತಿಯಂತೆ ೧೦೦೦ ಗಂಡು ಮಕ್ಕಳಿಗೆ ೯೧೪ ಹೆಣ್ಣು ಮಕ್ಕಳ ಹಂತಕ್ಕೆ ಕುಸಿದಿದೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಮ್ಮ

ದೇಶದ ಐದು ಕೋಟಿ ಹೆಣ್ಣು ಮಕ್ಕಳು ಕಾಣೆಯಾಗಿದ್ದಾರೆ. ಇದಕ್ಕೆ ನಮ್ಮ ನಾಗರಿಕ ಸಮಾಜ ಏನು ವಿವರಣೆ ನೀಡುತ್ತದೆ? ಅಭಿವೃದ್ಧಿ ಹೆಚ್ಚಾಗಿರುವುದನ್ನು ಸಾಕ್ಷರತೆಯ ಹೆಚ್ಚಳಕ್ಕೆ ಸಮನಾಗಿಸಿ ನಾವು ಬಿಂಬಿಸುತ್ತಿದ್ದೇವೆ. ಆದರೆ ಈ ಅಂಕಿ ಅಂಶಗಳ ಹಿನ್ನಲೆಯಲ್ಲಿ ಶಿಕ್ಷಣ ಮತ್ತು ಸಾಕ್ಷರತೆ ನಮ್ಮ ಬದುಕನ್ನು ಹೇಗೆ ಕಟ್ಟಿಕೊಡುತ್ತಿದೆ ಎಂಬ ಕುರಿತು ಮರುಚಿಂತನೆ ಅಗತ್ಯ.